ಇಸ್ತಿಹಾರ್ನಾಮೆ.

ತಾರೀಖು 13ನೆ ಆಗಸ್ಟು 1907.

ತುಮಕೂರು ಡಿಸ್ಟ್ರಿಕ್ಟು, ಡಿಸ್ಟ್ರಿಕ್ಟು ಮೇಜಸ್ಟ್ರೇಟ್ ಸಾಹೇಬರವರು.

ಕೆ. ಎಸ್. ದೊರೆಸಾಮಿ ಐಯ್ಯರ್, ಎಸ್‌ಕ್ವಯರ್‌ರವರ ಆಫೀಸಿನಿಂದ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ಡಿಸ್ಟ್ರಿಕ್ಟು ಮಜಕೂರು ತಿಬಟೂರು ತಾಲ್ಲೂಕು ತಾರೆಕುರ್ಚಿ ಗ್ರಾಮದ ಎಲ್ಲೆ ಸಮೀಪ ತಾರೇಕುರ್ಚಿ ಗ್ರಾಮಕ್ಕೆ ಸುಮಾರು ಮುಕ್ಕಾಲು ಮೈಲಿ ಅಂದರೆ, ತಾರೆಕುರ್ಚಿಯಿಂದ ಗುಬ್ಬಿ ತಾಲ್ಲೂಕು ಮುಸಕೊಂಡ್ಲಿ ಗ್ರಾಮಕ್ಕೆ ಹೋಗುವ ಕಾಲುದಾರಿ ಹತ್ತರ ಸದರಿ ಮುಸಕೊಂಡ್ಲಿ ಗ್ರಾಮದ ಸರ್ವೆ 31ನೆ ನಂಬರು ಜಮೀನಿನಲ್ಲಿ ಪೆರ್ನಿಸುಲರ್ ಮಿನರಲ್ಸ್ ಕಂಪೆನಿ ಸಂಘದವರು ಸುರಂಗ ಹಾಕುವದಕ್ಕಾಗುವ ತರಹೆ ಮದ್ದು, ಬತ್ತಿ, ಕೇಪ, ವಗೈರೆ ಪದಾರ್ಥಗಳನ್ನಿಡಲು ಒಂದು ಮನೆಯನ್ನು ಹಾಲಿ ಕಟ್ಟಿರುತ್ತಾರೆಯಷ್ಟೆ.

ಮೈಸೂರು ಸರ್ಕಾರದಿಂದ ಸಾದರಾಗಿರುವ 29—6—98ನೆ ಮರ್ಕುಂ 311. M.—1897—98ನೆ ನಂಬರು ಇಸ್ತಿಹಾರ್‌ನಲ್ಲಿ ಫಾಯಿಷ್ ಆಗಿರುವ ನಿಬಂಧನೆಗಳು ಮತ್ತು 3—12—1900ನೆ ಮರುಂನ 228.—M-1900—1901ನೆ ನಂಬರು ಪ್ರಕಟನೆಯನ್ನನುಸರಿಸಿ ಹೀಗೆ ಮದ್ದಿನ ಮನೆ ಸ್ಥಾಪಿತವಾಗಲು ಏನಾದರೂ ಆಕ್ಷೇಪಣೆಯುಳ್ಳವರು ಆ ಬಗ್ಗೆ ಬರಹ ಮೂಲಕವಾದ ಹೇಳಿಕೆಯನ್ನು ಇದೇ ಸಾಲ್ ಸೆಪ್ಟಂಬರ್ ಮಾಹೇ 13ನೆ ತಾರೀಖಾದ ಶುಕ್ರವಾರ ಮಧ್ಯಾಹ್ನ 11 ಘಂಟೆಗೆ ನಮ್ಮಲ್ಲಿ ತುಮಕೂರು ಮೊಕ್ಕಾಂನಲ್ಲಿ ಹಾಜರ್ಮಾಡಬಹುದು. ಸದರಿ ತಾರೀಖಿನಲ್ಲು ಈ ಪ್ರಕರಣವನ್ನು ಫೈಸಲ್‌ಗೆ ತರಿಸುತ್ತೆ. ಈ ಮದ್ದಿನ ಮನೆ ಸಮೀಪ ಗನಿ ಕೆಲಸಕ್ಕಾಗಿ ಗನಿಯವರು ಮಾಡಿಕೊಂಡಿರುವ ಭಂಡಿ ಜಾಡನ್ನು ಅವರ ಕ್ಯಾಂಪಿಗೆ ಸಮೀಪದಲ್ಲಿ ಮದ್ದಿನ ಮನೆಗೆ 200 ಗಜ ಫಾಸಲೆ ಇರುವಂತೆ ತಿರಗಿಸುವಂತೆ ಈ ಸಂಘದ ಸೆಕ್ರಿಟರಿ ಯವರು ಒಪ್ಪಿದಾರೆ.

ಎಂ. ಶ್ರೀನಿವಾಸಮೂರ್ತಿ,
ಫಾರ್ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 26ನೆ ಜುಲೈ 1907.

ಹುಣಸೂರು ತಾಲ್ಲೂಕು ಪಿರಿಯಾಪಟ್ಟಣದ ಹೋಬಳಿಗೆ ಶೇರಿದ ಜೋಡಿ ಹಿಟ್ಟನೇ ಹೆಬ್ಬಾಗಿಲು ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಹುಣಸೂರು ತಾಲ್ಲೂಕು ಕಛೇರಿಯಲ್ಲಿ 1907ನೆ ಸೆಪ್ಟಂಬರ್ ಮಾಹೆ 2ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಆಗಸ್ಟು 8ನೆ ಮರ್ಕುಂ 32ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 377ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 3ನೆ ಆಗಸ್ಟು 1907.

ನಾಗಮಂಗಲ ತಾಲ್ಲೂಕು ದೇವಲಾಪುರದ ಹೋಬಳಿಗೆ ಸೇರಿದ ಜೋಡಿ ಬೊಮ್ಮನಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಸದರಿ ಜೋಡಿ ಬೊಮ್ಮನಹಳ್ಳಿ ಗ್ರಾಮದಲ್ಲಿ 1907ನೆ ಸೆಪ್ಟಂಬರ್ ಮಾಹೆ 17ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಆಗಸ್ಟು 15ನೆ ಮರ್ಕುಂ 33ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 397ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 3ನೆ ಆಗಸ್ಟು 1907.

ನಾಗಮಂಗಲ ತಾಲ್ಲೂಕು ದೇವಲಾಪುರದ ಹೋಬಳಿಗೆ ಶೇರಿದ ಜೋಡಿ ನಲ್ಕುಂದಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಸದರಿ ಜೋಡಿ ನಲ್ಕುಂದಿ ಗ್ರಾಮದಲ್ಲಿ 1907ನೆ ಸೆಪ್ಟಂಬರು 16ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಆಗಸ್ಟು ತಾರೀಖು 15ನೆ ಮರ್ಕುಂ 33ನೆ ನಂಬರ ಮೈಸೂರು ಗೆಜೆಟ್ಟಿನ IIನೆ ಭಾಗದ 396ನೆ ನಂಬರು ಪೇಜು ನೋಡತಕ್ಕದ್ದು.

ತಾರೀಖು 31ನೆ ಜುಲೈ 1907.

ಚಾಮರಾಜನಗರ ತಾಲ್ಲೂಕು ಸಂತೆಮರಹಳ್ಳಿ ಹೋಬಳಿಗೆ ಶೇರಿದ ಜೋಡಿ ಕನ್ನಾಗಾಲ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಚಾಮರಾಜನಗರ ತಾಲ್ಲೂಕು ಕಛೇರಿಯಲ್ಲಿ 1907ನೆ ಅಕ್ಟೋಬರು ಮಾಹೆ 28ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಆಗಸ್ಟು ತಾರೀಖು 15ನೆ ಮರ್ಕುಂ 33ನೆ ನಂಬರ ಮೈಸೂರು ಗೆಜೆಟ್ಟಿನ IIನೆ ಭಾಗದ 398ನೆ ನಂಬರ ಪೇಜು ನೋಡತಕ್ಕದ್ದು.

ಎಂ. ಕಾಂತರಾಜೆ ಅರಸ್,
ಡೆಪ್ಯುಟಿ ಕಮೀಷನರ್.